# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2093 [2520] |
| ಸದಸ್ಯರ ಹೆಸರು | ಶ್ರೀ ವೈ. ಎಂ. ಸತೀಶ್ [ಸ್ಥಳೀಯ ಸಂಸ್ಥೆಗಳ ಕ್ಷೇತ್ರ] |
| ವಿಷಯ | "ಸಂಧ್ಯಾ ಸುರಕ್ಷಾ" ಯೋಜನೆ ಫಲಾನುಭವಿಗಳಿಗೆ ಮಂಜೂರಾತಿ ವಿಳಂಬವಾಗುತ್ತಿರುವ ಬಗ್ಗೆ. |
| ಉತ್ತರಿಸಬೇಕಾದ ದಿನಾಂಕ | 23/3/2022 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಸಂಧ್ಯಾ ಸುರಕ್ಷಾ ಯೋಜನೆ ಜಾರಿಯಲ್ಲಿದೆಯೇ : ಇದ್ದಲ್ಲಿ, ಯಾವಾಗಿನಿಂದ ಜಾರಿಯಲ್ಲಿದೆ. 60 ವರ್ಷ ತುಂಬಿದ ಫಲಾನುಭವಿಗಳಿಗೆ ಆಧಾರ್ ಕಾರ್ಡ್ ಮತ್ತು ಬಿ.ಪಿ.ಎಲ್. ಪಡಿತರ ಚೀಟಿಯ ಆಧಾರದ ಮೇಲೆ ಸರ್ಕಾರ ಸ್ವಯಂ ಆಗಿ ವೃದ್ಧಾಪ್ಯ ವೇತನ ನೀಡುತ್ತಿದೆಯೇ ಇದ್ದಲ್ಲಿ ಯೋಜನೆಯ ಅನುಕೂಲತೆಗಳೇನು [ವಿವರ ನೀಡುವುದು] | ರಾಜ್ಯದಲ್ಲಿ ಸಂಧ್ಯಾ ಸುರಕ್ಷಾ ಯೋಜನೆಯು 2007 ರಿಂದ ಜಾರಿಯಲ್ಲಿದೆ. 65 ವರ್ಷ ತುಂಬಿದ ಫಲಾನುಭವಿಗಳಿಗೆ ಆಧಾರ್ ಕಾರ್ಡ್ ಮತ್ತು ಬಿ.ಪಿ.ಎಲ್. ಪಡಿತರ ಚೀಟಿಯ ಆಧಾರದ ಮೇಲೆ ಕುಟುಂಬದ ದತ್ತಾಂಶದ ಮಾಹಿತಿ ಮೇರೆಗೆ ನವೋದಯ ಆ್ಯಪ್ ಮೂಲಕ "ಮನೆ ಬಾಗಿಲಿಗೆ ಮಾಸಾಶನ" ಯೋಜನೆಯಡಿ ಪಿಂಚಣಿ ನೀಡಲಾಗುತ್ತಿದೆ.<br>ಈ ಯೋಜನೆಯಡಿ ಅರ್ಜಿ ರಹಿತ ಮೊಬೈಲ್ ಆ್ಯಪ್ ಆಧಾರಿತ ಪರಿಶೀಲನೆಯೊಂದಿಗೆ ಅರ್ಹರಿಗೆ ಮನೆ ಬಾಗಿಲಿನಲ್ಲಿಯೇ ಪಿಂಚಣಿ ಮಂಜೂರು ಮಾಡಲಾಗುತ್ತಿದೆ. |
| ಆ | ಯೋಜನೆಯ ಫಲಾನುಭವಿಯಾಗಲು ನಿಗದಿ ಪಡಿಸಿರುವ ಮಾನದಂಡಗಳೇನು: ರಾಜ್ಯದ ಯಾವ್ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಅರ್ಜಿ ಸಲ್ಲಿಸಲಾಗಿದೆ: ಪ್ರಸ್ತುತ ಪ್ರಯೋಜನ ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆಗಳೆಷ್ಟು [ ವಿವರ ನೀಡುವುದು] | ಸಂಧ್ಯಾ ಸುರಕ್ಷಾ ಯೋಜನೆಯಡಿ ಪಿಂಚಣಿ ಪಡೆಯಲು ಈ ಕೆಳಕಂಡ ಮಾನದಂಡಗಳನ್ನು ನಿಗದಿಪಡಿಸಲಾಗಿದೆ :<br>➢ 65 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರು<br>➢ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಕುಟುಂಬದ ವಾರ್ಷಿಕ ಆದಾಯ ರೂ. 32,000/- ಗಳಿಗಿಂತ ಕಡಿಮೆ ಇರಬೇಕು.<br>ಪ್ರಸ್ತುತ ಪ್ರಯೋಜನ ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆಯನ್ನು ಅನುಬಂಧ-1ದಲ್ಲಿ ನೀಡಿದೆ. |
| ಇ | ಕಳೆದ 3 ವರ್ಷಗಳಿಂದ ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲ್ಲೂಕಿನ ಕಂಪ್ಲಿ ಹೋಬಳಿಯಲ್ಲಿ ಎಷ್ಟು ಅರ್ಜಿಗಳು ಸಲ್ಲಿಕೆಯಾಗಿದೆ : ಮತ್ತು ಎಷ್ಟು ಫಲಾನುಭವಿಗಳಿಗೆ ಮಂಜೂರಾಗಿದೆ. [ಗ್ರಾಮ, ಹೆಸರು ಮಂಜೂರಾದ ದಿನಾಂಕವಾರು ವಿವರ ನೀಡುವುದು] | ಸಂಧ್ಯಾ ಸುರಕ್ಷಾ ಯೋಜನೆಯಡಿ ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲ್ಲೂಕಿನ ಕಂಪ್ಲಿ ಹೋಬಳಿಯಲ್ಲಿ ಕಳೆದ ಮೂರು ವರ್ಷಗಳಿಂದ ಒಟ್ಟು 1688 ಅರ್ಜಿಗಳು ಸ್ವೀಕೃತವಾಗಿದ್ದು 1202 ಫಲಾನುಭವಿಗಳಿಗೆ ಮಂಜೂರು ಮಾಡಲಾಗಿದೆ. ಗ್ರಾಮವಾರು ಮಂಜೂರಾದ ಒಟ್ಟು ಅರ್ಜಿಗಳ ವಿವರ ಅನುಬಂಧ-2ದಲ್ಲಿ ಲಗತ್ತಿಸಿದೆ. |

| | ಪ್ರಶ್ನೆ | ಉತ್ತರ |
|---|---|---|
| ಈ | ಕಂಪ್ಲಿ ಹೋಬಳಿಯ ಮೆಟ್ರಿ ಗ್ರಾಮದ ಅರ್ಜಿದಾರರು ಯೋಜನೆಯ ಫಲಾನುಭವಿಗಳಿಗೆ ಸೂಕ್ತ ದಾಖಲಾತಿಗಳೊಡನೆ ಅರ್ಜಿ ಸಲ್ಲಿಸಿದ್ದರೂ ಅನಗತ್ಯವಾಗಿ ಇತ್ಯಾದಿ ದಾಖಲಾತಿಗಳ ಅವಶ್ಯಕತೆ ಇದೆ ಎಂದು ಮಂಜೂರಾತಿಗೆ ವಿಳಂಬ ನೀತಿ ಅನುಸರಿಸುತ್ತಿರುವುದು ನಿಜವೇ ಇಲ್ಲದಿದ್ದಲ್ಲಿ ಗ್ರಾಮದ ಯಾರಾವು ಯಾವ ದಿನಾಂಕದಂದು ಅರ್ಜಿ ಸಲ್ಲಿಸಿದ್ದಾರೆ ಮತ್ತು ಯಾವ ಕಾಲಮಿತಿಯೊಳಗೆ ಮಂಜೂರು ಮಾಡಲಾಗುವುದು [ವಿವರ ನೀಡುವುದು] | ಎಲ್ಲಾ ಪಿಂಚಣಿ ಯೋಜನೆಗಳನ್ನು ಸಕಾಲ ಸೇವೆಯಡಿ ತರಲಾಗಿದ್ದು, ಅರ್ಜಿ ಸ್ವೀಕರಿಸಿದ 45 ದಿನಗಳ ಒಳಗೆ ಅರ್ಹರಿಗೆ ಪಿಂಚಣಿ ಮಂಜೂರಾತಿ ನೀಡುವಲ್ಲಿ ಕ್ರಮ ವಹಿಸಲಾಗುತ್ತಿದೆ. ಕಂಪ್ಲಿ ಹೋಬಳಿಯ ಮೆಟ್ರಿ ಗ್ರಾಮದಲ್ಲಿ 12 ಅರ್ಜಿಗಳು ಬಾಕಿಯಿದ್ದು, ಸಕಾಲ ಕಾಲಮಿತಿಯೊಳಗಿರುವ ಅರ್ಜಿಗಳಾಗಿದ್ದು, ಯಾವುದೇ ರೀತಿಯ ವಿಳಂಬ ಪ್ರಕರಣಗಳು ಇರುವುದಿಲ್ಲ. |
| ಉ | ವಿಳಂಬ ನೀತಿ ಅನುಸರಿಸಿ ಯೋಜನೆಯನ್ನು ಜಾರಿಗೊಳಿಸದೆ ಇರುವುದಕ್ಕೆ ಸಂಬಂಧಪಟ್ಟ ಅಧಿಕಾರಿ / ನೌಕರರ ವಿರುದ್ಧ ಸರ್ಕಾರ ಕೂಡಲೇ ಕೈಗೊಳ್ಳುವ ಕ್ರಮಗಳೇನು? [ವಿವರ ನೀಡುವುದು] | |

ಸಂಖ್ಯೆ : ಡಿಎಸ್‌ಎಸ್ ಪಿ –ಎಲ್ ಸಿಕ್ಯೂ 16/2022

[ಆರ್. ಅಶೋಕ]
ಕಂದಾಯ ಸಚಿವರು

ಶ್ರೀ ವೈ. ಎಂ. ಸತೀಶ್ [ಸ್ಥಳೀಯ ಸಂಸ್ಥೆಗಳ ಕ್ಷೇತ್ರ] ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2093

[2520] ಕ್ಕೆ ಅನುಬಂಧ -1

ಸಂಧ್ಯಾ ಸುರಕ್ಷ ಯೋಜನೆಯಡಿ ಜಿಲ್ಲಾವಾರು ಫಲಾನುಭವಿಗಳ ವಿವರ :

| ಕ್ರಮ ಸಂಖ್ಯೆ | ಜಿಲ್ಲೆಗಳ ಹೆಸರು | ಫಲಾನುಭವಿಗಳ ಸಂಖ್ಯೆ |
|---|---|---|
| 1 | ಬಾಗಲಕೋಟೆ | 91524 |
| 2 | ಬಳ್ಳಾರಿ | 85378 |
| 3 | ಬೆಂಗಳೂರು ಗ್ರಾಮಾಂತರ | 45663 |
| 4 | ಬೆಳಗಾವಿ | 321428 |
| 5 | ಬೆಂಗಳೂರು | 163290 |
| 6 | ಬೀದರ್ | 102070 |
| 7 | ಚಾಮರಾಜನಗರ | 37234 |
| 8 | ಚಿಕ್ಕಬಳ್ಳಾಪುರ | 89957 |
| 9 | ಚಿಕ್ಕಮಗಳೂರು | 77671 |
| 10 | ಚಿತ್ರದುರ್ಗ | 122014 |
| 11 | ದಕ್ಷಿಣ ಕನ್ನಡ | 61541 |
| 12 | ದಾವಣಗೆರೆ | 83704 |
| 13 | ಧಾರವಾಡ | 67916 |
| 14 | ಗದಗ | 33122 |
| 15 | ಹಾಸನ | 94156 |
| 16 | ಹಾವೇರಿ | 89526 |
| 17 | ಕಲಬುರ್ಗಿ | 105559 |
| 18 | ಕೊಡಗು | 20683 |
| 19 | ಕೋಲಾರ | 93570 |
| 20 | ಕೊಪ್ಪಳ | 76121 |
| 21 | ಮಂಡ್ಯ | 98193 |
| 22 | ಮೈಸೂರು | 155021 |
| 23 | ರಾಯಚೂರು | 96104 |
| 24 | ರಾಮನಗರ | 83646 |
| 25 | ಶಿವಮೊಗ್ಗ | 66723 |
| 26 | ತುಮಕೂರು | 203426 |
| 27 | ಉಡುಪಿ | 64486 |
| 28 | ಉತ್ತರ ಕನ್ನಡ | 50878 |
| 29 | ವಿಜಯಪುರ | 117747 |
| 30 | ಯಾದಗಿರಿ | 76400 |
| **ಒಟ್ಟು** | | **2874751** |

ಶ್ರೀ ವೈ. ಎಂ. ಸತೀಶ್ [ಸ್ಥಳೀಯ ಸಂಸ್ಥೆಗಳ ಕ್ಷೇತ್ರ] ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2093

[2520] ಕ್ಕೆ ಅನುಬಂಧ -2

ಸಂಧ್ಯಾ ಸುರಕ್ಷ ಯೋಜನೆಯಡಿ ಅರ್ಜಿಗಳ ಗ್ರಾಮವಾರು ಮಂಜೂರಾದ ವಿವರ :

| ಕ್ರಮ ಸಂಖ್ಯೆ | ಗ್ರಾಮದ ಹೆಸರು | ಮಂಜೂರಾದ ಅರ್ಜಿಗಳ ಸಂಖ್ಯೆ |
|---|---|---|
| 1 | ಅರಳಿಹಳ್ಳಿ | 23 |
| 2 | ಬೆಳಗೋಡುಹಾಳ್ | 14 |
| 3 | ಚಿಕ್ಕಜಾಯಿಗನೂರು | 30 |
| 4 | ದೇವಲಾಪುರ | 64 |
| 5 | ದೇವಸಮುದ್ರ | 91 |
| 6 | ಎಮ್ಮಿಗನೂರು | 141 |
| 7 | ಹಂಪಾದೇವನಹಳ್ಳಿ | 18 |
| 8 | ಹಿರೇಹಾಯಿಗನೂರು | 2 |
| 9 | ಹೊನ್ನಳ್ಳಿ | 19 |
| 10 | ಇಟಗಿ | 11 |
| 11 | ಜೀರಿಗನೂರು | 14 |
| 12 | ಜವುಕು | 36 |
| 13 | ಕಂಪ್ಲಿ | 297 |
| 14 | ಕಣ್ವಿತಿಮ್ಮಲಾಪುರ | 31 |
| 15 | ಮಾವಿನಹಳ್ಳಿ | 11 |
| 16 | ಮೆಟ್ರಿ | 49 |
| 17 | ಮುದ್ದಾಪುರ-1 | 39 |
| 18 | ಮುದ್ದಾಪುರ-2 | 29 |
| 19 | ನೆಲ್ಲುಡಿ | 71 |
| 20 | ರಾಮಸಾಗರ | 94 |
| 21 | ಸಣಾಪುರ | 37 |
| 22 | ಸಂಕ್ಲಾಪುರ | 1 |
| 23 | ಸೋಮಲಾಪುರ | 16 |
| 24 | ಸುಗ್ಗೇನಹಳ್ಳಿ | 34 |
| 25 | ಉಪ್ಪಾರಹಳ್ಳಿ | 30 |
| | ಒಟ್ಟು | 1202 |